ವಾರದ ಪತ್ರ

## ಪುಟಾಣಿ ರೀತೂ ಎಂಬ ಎಲ್ಲರ ಮಗಳು

ಝೀ ಕನ್ನಡದಲ್ಲಿ 'ಸೀತಾರಾಮ' ಉತ್ತಮ ಕಥಾಹೂರಣ ಹೊಂದಿರುವುದರಿಂದ ಮೆಚ್ಚುಗೆಯಾಗುತ್ತಿದೆ. ವಿದೇಶದಲ್ಲಿ ಚಿತ್ರೀಕರಣ, ಆಕರ್ಷಕ ನಿರೂಪಣೆ, ಮುಖ್ಯಮಂತ್ರಿ ಚಂದ್ರು, ವೈಷ್ಣವಿ, ಪೂಜಾ ಲೋಕೇಶ್ ಅವರಂತಹ ನುರಿತ ಕಲಾವಿದರ ನಟನೆ ಮತ್ತು ಪುಟಾಣಿ ರೀತೂ ಸಿಂಗ್ ಅಭಿನಯದಿಂದ ವೀಕ್ಷಕರ ಮನ ಗೆಲ್ಲುತ್ತಾಳೆ. ಡ್ರಾಮಾ ಜೂನಿಯರ್ ಮೂಲಕ ಗಮನ ಸೆಳೆದಿದ್ದ ನೇಪಾಳ ಸಂಜಾತೆ ತನ್ನ ಅಸ್ಖಲಿತ ಕನ್ನಡ ಸಂಭಾಷಣೆ, ಮುಗ್ಧ ಅಭಿನಯ, ಹಾವಭಾವಗಳಿಂದ ಧಾರಾವಾಹಿಗೂ ಒಂದು ತೂಕ ತಂದುಕೊಟ್ಟಿದ್ದಾಳೆ. ಧಾರಾವಾಹಿಗಳನ್ನು ಇಷ್ಟಪಡದ ನಾನು ಆ ಬಾಲೆಗೆ ಅದೆಷ್ಟು ಫಿದಾ ಆಗಿದ್ದೇನೆಂದರೆ ಮೂವರು ಹೆಣ್ಣುಮಕ್ಕಳ ತಂದೆಯಾಗಿ ದತ್ತು ಕೊಟ್ಟರೆ ಅವಳನ್ನೂ ಮಗಳೆಂದು ತೆಗೆದುಕೊಳ್ಳಲು ಸಿದ್ಧನಾಗಿದ್ದೇನೆ.

—ಕೆ. ಶ್ರೀನಿವಾಸರಾವ್, ಹರಪನಹಳ್ಳಿ

## ಇವ ಭಾಗ್ಯದ ಭಗವಂತ

ಝೀ ಕನ್ನಡದಲ್ಲಿ ಮೂಡಿ ಬರುತ್ತಿರುವ 'ಭೂಮಿಗೆ ಬಂದ ಭಗವಂತ' ಕುಟುಂಬದ ಎಲ್ಲರೂ ವೀಕ್ಷಿಸುವ ಮಟ್ಟಿಗೆ ಇದೆ. ಸದ್ಯ ಇದರಲ್ಲಿ ಗೋಳು, ಮತ್ಸರ, ದ್ವೇಷ, ಅಸೂಯೆ, ಅತ್ತೆ ಸೊಸೆ ಜಗಳ, ಮನೆ ಮುರಿಯುವ ತಂತ್ರಗಳಿಗೆ ಅವಕಾಶವಿಲ್ಲ. ಮಧ್ಯಮ ವರ್ಗದ ಸಂಸಾರದ ಸುತ್ತಮುತ್ತ ಕಥೆಯನ್ನು ವಿಸ್ತರಿಸಿದ್ದಾರೆ.

ಭಗವಂತ ಯಾವಾಗಲೂ ನಮ್ಮ ಜೊತೆಗಿದ್ದು ನಮ್ಮ ನಿರ್ಧಾರಗಳ ತಪ್ಪು–ಸರಿಗಳನ್ನು ತಿದ್ದುತ್ತಾನೆ ಎಂದು ತೋರಿಸಿದ್ದಾರೆ. ಇಲ್ಲಿ ಭಗವಂತ ಎಂದರೆ ನಮ್ಮ ಆತ್ಮಸಾಕ್ಷಿ ಎಂದರೆ ತಪ್ಪಾಗಲಾರದು. ನಾವು ಯಾವುದೇ ಕಾರ್ಯ ಮಾಡಿದರೂ ನಮ್ಮ ವಿವೇಕ ಸರಿ, ತಪ್ಪುಗಳನ್ನು ಎಚ್ಚರಿಸುತ್ತದೆ ಎಂಬುದನ್ನು ಭಗವಂತನ ಮೂಲಕ ನಿರ್ದೇಶಕರು ಪ್ರಸ್ತುತ ಪಡಿಸುತ್ತಿದಾರೆ. ಅವರಿಗೆ ಅಭಿನಂದನೆಗಳು.

—ಎಸ್. ರಮೇಶ

## ಬೃಂದಮ್ಮನ ಮಾತು ಯುವಜನಕ್ಕೆ ಮಾರ್ಗದರ್ಶಿ

ಸಿರಿಕನ್ನಡದ 'ಮತ್ತೆ ಮಾಯಾಮೃಗ'ದಲ್ಲಿ ಅಭಿನಂದನ್–ಮಹತಿ ಮದುವೆಗೆ ಅಭಿ ಅಮ್ಮ ನಿರಾಕರಿಸುತ್ತಾರೆ. ಇದರಿಂದ ಪ್ರೀತಿಸಿದ ಇಬ್ಬರಿಗೂ ಆಘಾತವಾಗುತ್ತದೆ. ಆಗ ತಂಗಿ ಬೇರೆ ಇರಲು ಸಲಹೆ ಕೊಡುತ್ತಾಳೆ. ಆಗ ಬೃಂದಾ 'ಯಾವುದೇ ಕಾರಣಕ್ಕೂ ಬೇರೆ ಮನೆ ಮಾಡಬೇಡ. ಪೋಷಕರ ಮನಸ್ಸನ್ನು ಒಲಿಸಿಕೊ, ಅವರ ಮಾತಿಗೆ ಎದುರುತ್ತರ ಕೊಡದೆ ಸಹನೆ ಹಾಗೂ ಪ್ರೀತಿಯಿಂದ ಪ್ರತಿಕ್ರಿಯೆ ನೀಡು. ಕ್ರಮೇಣ ಅವರು ಬದಲಾಗುತ್ತಾರೆ. ಜೀವನ ಚೆನ್ನಾಗಿರುತ್ತೆ' ಅಂತ ಹೇಳುತ್ತಾಳೆ. ಇಂತಹ ಉತ್ತಮ ಸಲಹೆಯಿಂದ ಮಹತಿಗೂ ಖುಷಿ ಆಗುತ್ತೆ. ಅದು ಈಗಿನ ಎಷ್ಟೋ ಯುವಕರಿಗೆ ಮಾರ್ಗದರ್ಶನ ನೀಡುವಂತೆ ಇತ್ತು.

—ಭಾರತೀ ಗಂಗಾಧರ್, ಬೆಂಗಳೂರು

## ಸಿನಿಮಾ ಪ್ರಸಾರದಲ್ಲಿ ಸುಧಾರಣೆ ಯಾವಾಗ?

ಕನ್ನಡದಲ್ಲಿ ನಾಲ್ಕಾರು ಜನಪ್ರಿಯ ಸಿನಿಮಾ ವಾಹಿನಿಗಳಿವೆ. ಒಳ್ಳೆಯ ಸಿನಿಮಾ ನೀಡುವ ಯತ್ನದಲ್ಲಿ ಅವುಗಳ ನಡುವೆ ಪೈಪೋಟಿಯಿಲ್ಲ. ಸಿನಿಮಾಗಳ ಗುಣಮಟ್ಟ ಬೇಸರ ಹುಟ್ಟಿಸುತ್ತದೆ. ತಮಿಳು, ತೆಲುಗು, ಮಲೆಯಾಳಂ ಭಾಷೆಯಿಂದ ಕನ್ನಡಕ್ಕೆ ಡಬ್ ಮಾಡಿದ ಸಿನಿಮಾಗಳನ್ನೇ ಹೆಚ್ಚು ಹಾಕುತ್ತಾರೆ. ಅದನ್ನು ಬಿಟ್ಟರೆ 'ಹಾಡಿದ್ದೇ ಹಾಡೋ ಕಿಸಬಾಯಿ ದಾಸ' ಎಂಬ ಮಾತಿನಂತೆ ಕೆಲವೊಂದು ಸಿನಿಮಾಗಳನ್ನು ಮೇಲಿಂದ ಮೇಲೆ ಪ್ರಸಾರ ಮಾಡುತ್ತಾರೆ.

ಉದಯ ಮೂವೀಸ್‌ನಲ್ಲಿ ಕೆಲವು ವರ್ಷಗಳ ಹಿಂದೆ ಉತ್ತಮ ಸಿನಿಮಾಗಳು ಬರುತ್ತಿದ್ದವು. ಕಪ್ಪು ಬಿಳುಪು ಸಿನಿಮಾಗಳೂ ಆಗಾಗ ಪ್ರಸಾರವಾಗುತ್ತಿದ್ದವು. ಈಗ ಅವೂ ಕಡಿಮೆ ಆಗಿವೆ. ಸಿನಿಮಾಕ್ಕೆಂದೇ ಮೀಸಲಾದ ವಾಹಿನಿಗಳು ಅತ್ಯುತ್ತಮ ಸಿನಿಮಾಗಳನ್ನು ಪ್ರಸಾರ ಮಾಡಿದರೆ ಚೆನ್ನಾಗಿರುತ್ತದೆ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಕಾಫಿಗೆ ಉಪ್ಪು, ಅಯ್ಯೋ ಬೆಪ್ಪು!

'ಜಾಣರ ಪೆಟ್ಟಿಗೆ' ವಿಭಾಗದಲ್ಲಿ ಬರುವ ಕಿರುತೆರೆಯ ಕುರಿತ ವೀಕ್ಷಕರ ಅಭಿಪ್ರಾಯಗಳಲ್ಲಿ ಕೆಲವನ್ನಾದರೂ ರೂಢಿಸಿಕೊಂಡರೆ ಧಾರಾವಾಹಿಗಳ ಗುಣಮಟ್ಟ ಹೆಚ್ಚುತ್ತದೆ. ಎಲ್ಲ ಕಥೆಗಳು ಒಂದೇ ಫ್ಯಾಕ್ಟರಿಯಲ್ಲಿ ತಯಾರಾಗುತ್ತಿವೆಯೇ ಎನ್ನುವಷ್ಟರ ಮಟ್ಟಿಗೆ ಒಂದರ ಪಡಿಯಚ್ಚು ಮತ್ತೊಂದರಲ್ಲಿ ಗೋಚರಿಸುತ್ತಿದೆ. ಬಹುತೇಕ ಕಥೆಗಳಲ್ಲಿ ಸಂಸಾರದಲ್ಲಿ ಹುಳಿ ಹಿಂಡುವುದೇ ಕೆಲಸ ಎನ್ನುವಂತೆ ಆಗಿದೆ. ಕಾಫಿಗೆ ಉಪ್ಪು ಹಾಕುವವರು ಹೆಚ್ಚಾಗಿದ್ದಾರೆ. ಉಪ್ಪು ಬಿದ್ದೊಡನೆ ಹಾಲು ಹಾಳಾಗುತ್ತದೆ ಎನ್ನುವ ಸಾಮಾನ್ಯ ಜ್ಞಾನವೂ ಅವರಿಗಿಲ್ಲ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ದತ್ತಣ್ಣನಿಗೆ ಬೈಗುಳ ಶೋಭಿಸುವುದಿಲ್ಲ

ಝೀ ಕನ್ನಡದ 'ಶ್ರೀರಸ್ತು ಶುಭಮಸ್ತು' ಕಥೆ ಮನಮುಟ್ಟುವ ಸಂಭಾಷಣೆಯಿಂದ ಕೂಡಿದ್ದು ತುಂಬಾ ಚೆನ್ನಾಗಿ ಬರುತ್ತಿದೆ. ದತ್ತಣ್ಣ, ಮಾಧವ, ತುಳಸಿ ಸೇರಿದಂತೆ ಪಾತ್ರಧಾರಿಗಳ ಅಭಿನಯವೂ ಸೊಗಸಾಗಿದೆ. ಆದರೆ ದತ್ತಣ್ಣ ಅವರು ಮಾಧವ ಅವರನ್ನು ಈಗಲೂ 'ಚಪ್ಲಿ ಕಳ್ಳ' ಎನ್ನುವುದು ಸಹ್ಯವಾಗುವುದಿಲ್ಲ. ಮುಂದಿನ ಸಂಚಿಕೆಗಳಲ್ಲಿ ಹೀಗಾಗದಂತೆ ನಿರೀಕ್ಷಿಸಬಹುದೇ?

—ಎಲ್.ಆರ್. ಚಂದ್ರಶೇಖರ್, ಲಿಂಗದಹಳ್ಳಿ

## ಸೀತಾರಾಮನ ಲವಲವಿಕೆಯೂ, ಕೃತಕತೆಯೂ...

ಝೀ ಕನ್ನಡದ 'ಸೀತಾರಾಮ' ಲವಲವಿಕೆಯೊಂದಿಗೆ ಆರಂಭಗೊಂಡಿದೆ. ನಾಯಕಿ ಪಾತ್ರದ 'ಬಿಗ್‌ಬಾಸ್' ಸ್ಪರ್ಧಿ ವೈಷ್ಣವಿ, ಸಿಹಿಯ ಪಾತ್ರ ವಹಿಸಿರುವ 'ಡ್ರಾಮಾ ಜೂನಿಯರ್ಸ್'ನ ಮುದ್ದು ಹುಡುಗಿ ರೀತೂ ಸಿಂಗ್ ವಿಶೇಷ ಆಕರ್ಷಣೆಯಾಗಿದ್ದಾರೆ. ನೈಜ ಅಭಿನಯವಿದೆ. ಆದರೆ ಕೆಲವು ದೃಶ್ಯಗಳು ಸರಿಯೆನ್ನಿಸಲಿಲ್ಲ. ವಿದೇಶದಿಂದ ಆಗಮಿಸಿದ ನಾಯಕ ಶೂ ಧರಿಸಿ ಮನೆಯೊಳಗೆ ಪ್ರವೇಶಿಸಿದ್ದು ಇಂದಿನ ತಲೆಮಾರಿನ ಫ್ಯಾಷನ್ ಅನ್ನಬಹುದೇನೋ. ಮನೆಯೊಳಗೇ ಇದ್ದ ಹಿಂದಿನ ತಲೆಮಾರಿನ ತಾತ ಮತ್ತು ಅವರ ಮಗ ಶೂ ಧರಿಸಿ ಮನೆಯೊಳಗೆ ಓಡಾಡುತ್ತಿರುವುದು ಅವಾಸ್ತವವೆನಿಸುತ್ತಿದೆ.

—ರಮಣ್ ಶೆಟ್ಟಿ ರೆಂಜಾಳ್, ಮುಂಬೈ

## 'ಸತ್ಯ' ಬಳಗಕ್ಕಿರಲಿ ಸಾಮಾಜಿಕ ಕಳಕಳಿ

ಝೀ ಕನ್ನಡದ 'ಸತ್ಯ' ಎತ್ತಲೋ ಸಾಗುತ್ತಿದೆ. ಹೇಗೆ ಮುಂದುವರಿಸಬೇಕು ಎಂದು ತಿಳಿಯದೆ ಬಾಲಿಶ ಸನ್ನಿವೇಶಗಳನ್ನು ತುರುಕುತ್ತಿದ್ದಾರೆ. ಇಷ್ಟು ದಿನ ಕಣ್ಮರೆ ಆಗಿದ್ದ ದಿವ್ಯಾಳ ದೊಡ್ಡಪ್ಪ ದಿಢೀರ್ ಪ್ರತ್ಯಕ್ಷವಾಗಿ ದುಡ್ಡನ್ನು ದುಪ್ಪಟ್ಟು ಮಾಡುವ ಜಾಲಕ್ಕೆ ತಳ್ಳಲು ಹವಣಿಸುತ್ತಿದ್ದಾನೆ. ಅಂಥ ಪ್ರಕರಣಗಳ ಬಗ್ಗೆ ದಿನಪತ್ರಿಕೆಗಳಲ್ಲಿ ಎಚ್ಚರಿಕೆ ನೀಡುತ್ತಾರೆ. ವಿಪರ್ಯಾಸ ಎಂದರೆ ಅದನ್ನೇ ಧಾರಾವಾಹಿಗಳಲ್ಲಿ ತೋರಿಸುವುದು. ಖಳನಾಯಕಿಯರ ಅಟ್ಟಹಾಸ, ಸತ್ಯಕ್ಕೆ ದೂರವಾದ, ಸಾಮಾಜಿಕ ಕಳಕಳಿ ಇಲ್ಲದ ಕಥೆಗಳೇ ಮೆರೆದಾಡುತ್ತಿವೆ.

—ಅರುಣ್ ಕೆ.ಎಸ್., ಬೆಂಗಳೂರು

## ಪುಟ್ಟಕ್ಕನಿಗೆ ಶಹಬ್ಬಾಸ್‌ಗಿರಿ

ತೆಲುಗು ಧಾರಾವಾಹಿ 'ರಾಧಮ್ಮ ಕೂತುರು' ಝೀ ಕನ್ನಡದಲ್ಲಿ 'ಪುಟ್ಟಕ್ಕನ ಮಕ್ಕಳು' ಹೆಸರಿನಲ್ಲಿ ಪ್ರಸಾರವಾಗುತ್ತಿದೆ. ರೀಮೇಕ್ ಆದರೂ ಸ್ವಾರಸ್ಯಕರವಾಗಿ ಮೂಡಿಬರುತ್ತಿದೆ. ಎಲ್ಲೂ ಎಳೆಯುತ್ತಿಲ್ಲ ಎಂದು ಸದ್ಯ ಅನ್ನಿಸುತ್ತಿದೆ. ಗ್ರಾಮೀಣ ಬದುಕಿನ ಚಿತ್ರಣವನ್ನು ನೈಜವಾಗಿ ತಂದಿದ್ದಾರೆ. ಪುಟ್ಟಕ್ಕನ ಪಾತ್ರವನ್ನು ನಿರ್ವಹಿಸುವ ಉಮಾಶ್ರೀ ಅವರ ನಟನೆ ಅದ್ಭುತವಾಗಿದೆ.

—ಕೆ.ಎನ್. ಪ್ರಭಾಕರ ಗುಪ್ತ, ಹಾಸನ